ಉದ್ದೇಶಪೂರ್ವಕವಾಗಿ ತಪ್ಪು ಸುಳಿವುಗಳನ್ನು ನೀಡುವದರ ಮೂಲಕ ಟೆಡ್ 'ಎಫ್.ಬಿ.ಐ.'ನ ದಾರಿ ತಪ್ಪಿಸುತ್ತಿದ್ದ. ಪ್ರತೀ ಲೆಟರ್ ಬಾಂಬ್‌ನಲ್ಲಿ ಎಫ್.ಸಿ. (ಫ್ರೀಡಮ್ ಕ್ಲಬ್) ಎಂದು ಕೆತ್ತಿದ ಲೋಹದ ತಗಡನ್ನು ಇರಿಸುತ್ತಿದ್ದ. ಯಾವ ಸಾಧನದ ಮೇಲೂ ತನ್ನ ಬೆರಳಚ್ಚು ಗುರುತು ಇರದಂತೆ ಎಚ್ಚರ ವಹಿಸುತ್ತಿದ್ದ. 'ನಾನು' ಎಂಬ ಪದ ಬಳಸುವ ಬದಲು 'ನಾವು' ಎಂದೇ ಇರುತ್ತಿದ್ದುದರಿಂದ ಈ ಕೃತ್ಯದಲ್ಲಿ ಎಷ್ಟು ದೊಡ್ಡ ತಂಡ ಭಾಗಿಯಾಗಿದೆ ಎಂಬುದು ಗೊತ್ತಾಗುವಂತಿರಲಿಲ್ಲ. 'ಎಫ್.ಬಿ.ಐ.' ಇತಿಹಾಸದಲ್ಲಿಯೇ ಯುನಾಬಾಂಬರ್ ಪ್ರಕರಣ 17 ವರ್ಷಗಳಷ್ಟು ದೀರ್ಘಕಾಲದ, 50 ದಶಲಕ್ಷ ಡಾಲರ್‌ಷ್ಟು ದುಬಾರಿ ವೆಚ್ಚದ ತನಿಖೆಯಾಗಿತ್ತು.




### ಸುಳಿವು ಕೊಟ್ಟ ಪ್ರಣಾಳಿಕೆ

'ಎಫ್.ಬಿ.ಐ.' ಕೈ ಚೆಲ್ಲಿ ಕುಳಿತ ಸಂದರ್ಭದಲ್ಲಿ ಟೆಡ್ ತನ್ನ ಬಗ್ಗೆ ತಾನೇ ಸುಳಿವು ಕೊಟ್ಟ. ಅಮೆರಿಕದ ಪ್ರತಿಷ್ಠಿತ ಪತ್ರಿಕೆಗಳು ತನ್ನ 23 ಸಾವಿರ ಪದಗಳ ಬರಹವನ್ನು (ಅದು ಅವನ ಪ್ರಣಾಳಿಕೆ) ಪ್ರಕಟಿಸಿದರೆ ನರಹತ್ಯಾ ಸರಣಿಯನ್ನು ನಿಲ್ಲಿಸುವುದಾಗಿ ತಿಳಿಸಿದ. ಅಷ್ಟು ದೀರ್ಘವಾದ ಲೇಖನವನ್ನು ಪ್ರಕಟಿಸುವುದು ಕಷ್ಟವಾದರೂ, ಆತನ ಪತ್ತೆಯಾದರೆ ಸಾಕೆಂದು 'ವಾಷಿಂಗ್ಟನ್ ಪೋಸ್ಟ್' ಪತ್ರಿಕೆಯು ಆತನ ಸುದೀರ್ಘ ಬರಹವನ್ನು ಪ್ರಕಟಿಸಿತು. ಆ ಪ್ರಕಟಣೆಯ ಮೂಲಕ ಯುನಾಬಾಂಬರ್‌ನ ಸುಳಿವು ದೊರೆಯಿತು.

### ಅದೂ ಹೇಗೆ?

ಟೆಡ್‌ನ ಕಿರಿಯ ಸಹೋದರ ಡೇವಿಡ್, ಆ ಬರಹ ಟೆಡ್‌ನದೇ ಇರಬಹುದೆಂದು ಪೋಲಿಸರ ಮುಂದೆ ಅನುಮಾನ ವ್ಯಕ್ತಪಡಿಸಿದ. ಟೆಡ್ ಬಹಳ ಹಿಂದೆ ತನ್ನ ಸಹೋದರನಿಗೆ 23 ಪುಟಗಳ ಔದ್ಯಮೀಕರಣ ವಿರೋಧಿ ವಿಷಯ ಕುರಿತು ಬರೆದ ಪ್ರಬಂಧವೊಂದನ್ನು ಕಳಿಸಿದ್ದ. ಪತ್ರಿಕೆಯಲ್ಲಿ ಪ್ರಕಟವಾದ ಬರಹದ ಅನೇಕ ವಾಕ್ಯಗಳು, ಗ್ರಾಮ್ಯ ಭಾಷೆ, ಕಾಗುಣಿತದಲ್ಲಿನ ತಪ್ಪುಗಳು, ಡೇವಿಡ್‌ನ ಬಳಿಯಿರುವ ಪ್ರಬಂಧಕ್ಕೆ ಹೋಲಿಕೆಯಾಗುತ್ತಿದ್ದವು. ಅವೆರಡರ ನಡುವೆ ಒಟ್ಟು 110 ಸಾಮ್ಯತೆಗಳನ್ನು ಗುರುತಿಸಲಾಯಿತು. ಕೊನೆಗೂ ಪತ್ತೇದಾರರ ಸೈನ್ಯವೇ ಮೊಂಟಾನಾ ಗುಡ್ಡಗಾಡು ಪ್ರದೇಶವನ್ನು ಜಾಲಾಡಿ, ಟೆಡ್‌ನನ್ನು ಏಪ್ರಿಲ್ 3, 1996ರಲ್ಲಿ ಬಂಧಿಸಿತು.

ವಿಚಾರಣೆಯ ವೇಳೆಗೆ ಟೆಡ್ ತನ್ನ ಅತಿರೇಕದ ಪ್ರತಿಪಾದನೆಗಳನ್ನು ಸಮರ್ಥಿಸಿಕೊಂಡ. ಜೈಲಿನಲ್ಲಿ ಆತ್ಮಹತ್ಯೆಗೆ ಯತ್ನಿಸಿದ. ಅವನನ್ನು ಮಾನಸಿಕ ಅಸ್ವಸ್ಥನೆಂಬ ಕಾರಣ ನೀಡಿ ಗಲ್ಲು ಶಿಕ್ಷೆಯಿಂದ ಪಾರುಮಾಡಲಾಯಿತು. ಆದರೆ, ಪೆರೋಲ್ ಇಲ್ಲದ (ಸಾಂತ್ವನದ ಬಿಡುಗಡೆಯೂ ಇಲ್ಲದ), ಒಂದಲ್ಲ ಎಂಟು ಜೀವಾವಧಿ ಶಿಕ್ಷೆಗಳನ್ನು (ಭಾರತದಲ್ಲಿ ಜೀವಾವಧಿ ಶಿಕ್ಷೆ 14 ವರ್ಷ, ಅಮೆರಿಕದಲ್ಲಿ 15 ವರ್ಷ) ನ್ಯಾಯಾಲಯ ವಿಧಿಸಿತು. ಈಗಾಗಲೇ ಆತ ಒಂದು ಜೀವಾವಧಿ ಶಿಕ್ಷೆಯನ್ನು ಮುಗಿಸಿ ಎರಡನೆಯದನ್ನು ಅನುಭವಿಸುತ್ತಿದ್ದಾನೆ.

ಟೆಡ್ ಜೈಲಿನಲ್ಲಿರುವಾಗ ಅವನ ವಿಚಾರಗಳು ಜನಪ್ರಿಯತೆ ಪಡೆದುಕೊಳ್ಳುತ್ತಿವೆ. 2010ರಲ್ಲಿ ಟೆಡ್ 'ತಾಂತ್ರಿಕ ಗುಲಾಮಗಿರಿ ಏಕೆ, ಹೇಗೆ?' ಎಂಬ ಪುಸ್ತಕವನ್ನು ಪ್ರಕಟಿಸಿದ. 2016ರಲ್ಲಿ ಅದರ ಪರಿಷ್ಕೃತ ಆವೃತ್ತಿ ಪ್ರಕಟಗೊಂಡಿತು. ಟೆಡ್‌ನ ಇನ್ನೊಂದು ಪುಸ್ತಕ 'ಟೆಕ್ ವಿರೋಧಿ ಕ್ರಾಂತಿ'ಯು 2016ರಲ್ಲಿ ಪ್ರಕಟವಾಯಿತು. ತಂತ್ರಜ್ಞಾನದ ಅಭಿವೃದ್ಧಿಯ ಅಡ್ಡ ಪರಿಣಾಮಗಳ ಕುರಿತು ಈಗ ಎಲ್ಲರೂ ಗಂಭೀರವಾಗಿ ಆಲೋಚಿಸತೊಡಗಿದ್ದಾರೆ. ಅತಿಯಾದ ಯಾಂತ್ರಿಕತೆ ಮನುಷ್ಯನ ಖಾಸಗೀತನವನ್ನು ವಶಪಡಿಸಿಕೊಂಡು ಅವನನ್ನು ನಿಯಂತ್ರಿಸಲು ಪ್ರಾರಂಭಿಸಿದೆ ಎಂಬ ಅರಿವು ಮೂಡತೊಡಗಿದೆ.

### ಜೈಲಿನಲ್ಲಿ ಬದುಕಿನ ಇಳಿಸಂಜೆ

ಈಗ 80ರ ಇಳಿವಯಸ್ಸಿನಲ್ಲಿರುವ ಟೆಡ್ ತಾನಿರುವ ಇಕ್ಕಟ್ಟಿನ ಜೈಲುಕೋಣೆಯಲ್ಲಿ ಶಿಸ್ತುಬದ್ಧ ಜೀವನವನ್ನು ನಡೆಸುತ್ತಿದ್ದಾನೆ. ಅನೇಕರೊಂದಿಗೆ ಪತ್ರ ಸಂವಹನ ನಡೆಸುತ್ತಾನೆ. ಅವನ ಒಂದೊಂದು ನಡೆಯೂ ಸಾರ್ವಜನಿಕರ ಕುತೂಹಲವನ್ನು ಕೆರಳಿಸುತ್ತಿದೆ. 2012ರಲ್ಲಿ ಅವನ ತರಗತಿಯ ವಿದ್ಯಾರ್ಥಿಗಳ 50ನೇ (1962 ರ ಬ್ಯಾಚ್) ಪುನರ್ಮಿಲನ ಕಾರ್ಯಕ್ರಮದ ಆಹ್ವಾನ ಪತ್ರಿಕೆಗೆ ಉತ್ತರಿಸುತ್ತಾ, ತನ್ನ ಸದ್ಯದ ವೃತ್ತಿ ಕಾಲಂನಲ್ಲಿ 'ಕೈದಿ' ಎಂದೂ, ಸಂದ ಪ್ರಶಸ್ತಿಗಳು ಕಾಲಂನಲ್ಲಿ 'ಜೀವಾವಧಿ ಶಿಕ್ಷೆ' ಎಂದೂ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದ್ದನು. ಅವನ ಅಭಿಮಾನಿಗಳಲ್ಲಿ ಸ್ವೀಡಿಷ್ ಹೋರಾಟಗಾರ್ತಿ ಗ್ರೇಟಾ ಥರ್ನ್ ಬರ್ಗ್ ಕೂಡ ಒಬ್ಬಳು. (ಅವಳೂ ಕೂಡ ತಂತ್ರಜ್ಞಾನದ ಈ ದಾಂಗುಡಿಯಿಂದಾಗಿಯೇ ಭೂಮಿಯ ತಾಪಮಾನ ಏರುತ್ತಿದೆ ಎಂದು ಎಚ್ಚರಿಸುತ್ತಿರುವ ಹದಿನೆಂಟರ ಪ್ರಾಯದ ಯುವತಿ.)

ಟೆಡ್‌ನ ಸಿದ್ಧಾಂತಗಳಿಗೆ ಮಾರುಹೋಗಿ ಜಾನ್ ಜೇಕಬ್ ಎಂಬ ನಿಸರ್ಗಪ್ರೇಮಿ 'ಗ್ರೂಪ್ ಆಫ್ ಇಕೋ ಅನಾರ್ಕಿಸ್ಟ್' ಹೆಸರಿನ, ನಿಸರ್ಗದಲ್ಲಿ ಮಾನವನ ಹಸ್ತಕ್ಷೇಪವನ್ನು ವಿರೋಧಿಸುವವರ ತಂಡ ಎಂಬ ಸಂಘಟನೆಯನ್ನು ಹುಟ್ಟುಹಾಕಿದ್ದಾನೆ. ಅನೇಕ ಜನ ಈ ಸಂಘಟನೆಯ ಸದಸ್ಯರಾಗಿದ್ದಾರೆ. ಟೆಡ್‌ನ ಪ್ರಣಾಳಿಕೆಯಲ್ಲಿನ ಮುನ್ನೋಟಗಳನ್ನು ಅನೇಕರು ಸತ್ಯ ಎಂದು ಒಪ್ಪಿಕೊಂಡಿದ್ದಾರೆ. 'ತಾಂತ್ರಿಕತೆಯ ಪ್ರಗತಿ ಎಂಬುದು ಮನುಷ್ಯನ ಮೂಲಭೂತ ಸ್ವಾತಂತ್ರ್ಯವನ್ನು, ಘನತೆಯನ್ನು ಅವನಿಗೆ ಗೊತ್ತಿಲ್ಲದಂತೆ ಕಸಿದುಕೊಳ್ಳುತ್ತದೆ' ಎಂಬ ಎಚ್ಚರಿಕೆಯನ್ನು ನೀಡುವುದಕ್ಕಾಗಿ ತಾನು ಬಾಂಬ್ ದಾಳಿಗೆ ಮುಂದಾದೆ ಎಂದು ಟೆಡ್ ಹೇಳಿದ್ದಾನೆ. 1996ರ ಅಮೆರಿಕ ದೂರದರ್ಶನದಲ್ಲಿ 'ಯುನಾಬಾಂಬರ್‌ಸತ್ಯಕಥೆ', 2011ರಲ್ಲಿ 'ಪಿ.ಓ. ಬಾಕ್ಸ್ ಯುನಾಬಾಂಬರ್' ಡಾಕ್ಯುಮೆಂಟರಿಗಳು ಪ್ರಸಾರಗೊಂಡಿವೆ. 2017ರಲ್ಲಿ ಡಿಸ್ಕವರಿ ಚಾನಲ್, ಟೆಡ್‌ನ ಕುರಿತ 'ಮ್ಯಾನ್ ಹಂಟರ್' ಎಂಬ ಎಂಟು ಸರಣಿಗಳನ್ನು ಒಳಗೊಂಡ ಕಾರ್ಯಕ್ರಮವನ್ನು ಪ್ರಸಾರ ಮಾಡಿದೆ.

ಔದ್ಯಮೀಕರಣದ ಅತಿರೇಕದಿಂದಾಗಿ ಭೂಮಿ ಬಿಸಿಯಾಗುತ್ತಿದೆ ಎಂಬುದನ್ನು ವಿಜ್ಞಾನಿಗಳು ಒಪ್ಪಿಕೊಂಡಿದ್ದಾರೆ. ಏರುತ್ತಿರುವ ತಾಪಮಾನವನ್ನು ನಿಯಂತ್ರಿಸುವುದು ಹೇಗೆಂಬ ಬಗ್ಗೆ ಪದೇ ಪದೇ ಜಾಗತಿಕ ಸಭೆಗಳು ನಡೆಯುತ್ತಿವೆ. ತಂತ್ರಜ್ಞಾನದ ಅತಿರೇಕದ ಪರಿಣಾಮಗಳನ್ನು ಯುನಾಬಾಂಬರ್ 60ರ ದಶಕದಲ್ಲೇ ಊಹಿಸಿದ್ದ. ಇತರರಿಗಿಂತ ಮುಂಚೆಯೇ ಅವನಿಗೆ ಅದು ಹೊಳೆದಿತ್ತು. ಆದರೆ ಅದನ್ನು ಜನರಿಗೆ ಮನದಟ್ಟು ಮಾಡುವಲ್ಲಿ ಆತ ಹಿಂಸಾಮಾರ್ಗವನ್ನು ಹಿಡಿದು 'ಭಯೋತ್ಪಾದಕ', 'ಮಾನಸಿಕ ಅಸ್ವಸ್ಥ' ಎಂಬ ಪಟ್ಟ ಗಳಿಸಬೇಕಾಯಿತು. ಅವನು ನಿರೀಕ್ಷಿಸಿದಷ್ಟು ಪರಿಣಾಮಕಾರಿಯಾಗಿ ಜನರಲ್ಲಿ ತಂತ್ರಜ್ಞಾನ ವಿರೋಧಿ ಕಿಡಿ ಹೊತ್ತಿಕೊಳ್ಳಲಿಲ್ಲ. ಅವನು ಹೇಳಹೊರಟ ಸಂದೇಶ ಜನರಿಗೆ ಆಗ ಅರ್ಥವಾಗುತ್ತಿರಲಿಲ್ಲವೇನೊ. ಆದರೆ ಆತನ ಪ್ರತಿಪಾದನೆ ದಿನದಿನಕ್ಕೂ ಸತ್ಯವಾಗುತ್ತಿದೆ. ಈಗಲೂ ಟೆಡ್ ಮಾಧ್ಯಮಗಳಿಗೆ ಸಂದರ್ಶನಗಳನ್ನು ನೀಡುತ್ತಿದ್ದಾನೆ. ತಾನು ಮಾನಸಿಕ ರೋಗಿ ಅಲ್ಲ, ಬದಲಿಗೆ ಮುಂದಾಗುವುದನ್ನು ಊಹಿಸಬಲ್ಲ ಪ್ರಜ್ಞಾವಂತ ಎಂಬುದನ್ನು ಸಾಬೀತುಪಡಿಸಲು ಹೆಣಗಾಡುತ್ತಿದ್ದಾನೆ.

ಪ್ರತಿಕ್ರಿಯಿಸಿ: feedback@sudha.co.in